ಸ್ಥಾಪಿಸಲು ಖಾಸಗಿ ಸಂಸ್ಥೆಯ ಮೇ: ಕೊಜೆಂಟ್ರಿಕ್ಸ್ (ಯು.ಎಸ್.ಎ) ಇವರೊಂದಿಗೆ ಕರ್ನಾಟಕ ಸರ್ಕಾರ ಒಡಂಬಡಿಕೆ ಮಾಡಿಕೊಂಡಿದೆ.

ಈ ಸ್ಥಾವರಗಳಿಂದ ಉತ್ಪತ್ತಿಯಾದ ವಿದ್ಯುತ್ ಸಾಗಾಣಿಕೆ ಮತ್ತು ವಿತರಣೆ ಮಾಡುವುದರ ಬಗ್ಗೆ ಕರ್ನಾಟಕ ವಿದ್ಯುತ್ ನಿಗಮ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗಳ ಜೊತೆ ಚರ್ಚೆ ನಡೆಯುತ್ತಿದೆ.

ಹೇಮಾವತಿ ಯೋಜನೆ ಕಾಮಗಾರಿ ಕೆಲಸ

459-ಶ್ರೀ ಎಸ್.ಶಫೀ ಅಹ್ಮದ್ (ತುಮಕೂರು) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೇಮಾವತಿ ಯೋಜನೆ ಕಾಮಗಾರಿಗಳ ಇತ್ತೀಚಿನ ಪರಿಷ್ಕೃತ ಅಂದಾಜು ಮೊತ್ತ ಹಾಗೂ ಇತ್ತೀಚಿನ ಎಡದಂಡೆ ನಾಲೆಯ ಕಾಮಗಾರಿಗಳ ಪ್ರಗತಿ ಮತ್ತು ಕೆಲಸದ ಹಂತ ಹಾಗೂ ಅಂದಾಜು ಮೊತ್ತ;

ಆ) ಬುಗುಡನಹಳ್ಳಿ ಅಮಾನಿಕೆರೆ ಕೆರೆಯವರೆಗಿನ ನಾಲಾ ಕಾಮಗಾರಿಗಳನ್ನು ಮುಗಿಸಲು ಬೇಕಾಗುವ ಕಾಲಾವಧಿ.

ಇ) ತುಮಕೂರು ವೃತ್ತದಲ್ಲಿ ತೆಗೆದುಕೊಂಡಿರುವ ಅಡ್ಡ ಮೋರಿಗಳ ಸಂಖ್ಯೆ : ಹಾಗೂ ಅವುಗಳಿಗೆ ಆಗುವ ಅಂದಾಜು ಮೊತ್ತ.

ಈ) ಎಡದಂಡೆ ನಾಲೆಯ ವಿತರಣಾ ಕೆಲಸಗಳನ್ನು ಏಕಕಾಲದಲ್ಲಿ ಕೈಗೊಳ್ಳಲಾಗಿದೆಯೇ? ಹಾಗಿದ್ದಲ್ಲಿ ಅವುಗಳ ಪ್ರಗತಿಯ ಹಂತ ಮತ್ತು ಬೇಕಾಗುವ ಅಂದಾಜು ಮೊತ್ತ.

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಹೇಮಾವತಿ ಯೋಜನೆಗಳ ಪರಿಷ್ಕೃತ ಅಂದಾಜು ಮೊತ್ತ ರೂ. 1215.00 ಕೋಟಿಗಳು. ಸಿ.ಡಿ. ಮತ್ತು ವಿತರಣಾ ನಾಲೆಗಳೂ ಸೇರಿದಂತೆ ಟಿ.ಬಿ.ಸಿ.ಯ 0 ಕಿ.ಮೀ. ಇಂದ 131 ಕಿಮೀ. ವರೆಗಿನ ಕಾಮಗಾರಿಗಳು ಪ್ರಗತಿಯ ಹಂತದಲ್ಲಿವೆ. ಇದರಲ್ಲಿ ಕೆಲವು ಮುಕ್ತಾಯ ಹಂತದಲ್ಲಿರುತ್ತವೆ. ಕಿಮೀ. 81,83,84 ಮತ್ತು 115 ರಲ್ಲಿ ಕೆಲವು ಕ್ಲಿಷ್ಟಕರವಾದ ಭೂ ಸ್ವಾಧೀನ ಸಮಸ್ಯೆಗಳು ಇರುವುದರಿಂದ ನಾಲಾ ಕೆಲಸ ನಿಂತಿರುತ್ತದೆ. ಇವುಗಳ ಪರಿಷ್ಕೃತ ಅಂದಾಜು ಮೊತ್ತ ರೂ. 360.40 ಕೋಟಿಗಳು.

ಆ) ಡಿಸೆಂಬರ್-94ರ ಒಳಗಾಗಿ ಮುಗಿಸಲು ಕಾರ್ಯ ಕ್ರಮ ಹಮ್ಮಿಕೊಳ್ಳಲಾಗಿದೆ

ಇ) ತುಮಕೂರು ಶಾಖಾ ನಾಲೆಯ ಅಡಿಯಲ್ಲಿ 257 ಅಡ್ಡಮೋರಿ ಕೆಲಸಗಳಿದ್ದು, ಈ ಎಲ್ಲಾ ಅಡ್ಡಮೋರಿ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಟಿ. ಮರಿಯಪ್ಪ ನಾಲೆಯ ಅಡಿಯಲ್ಲಿ 146 ಅಡ್ಡಮೋರಿ ಕೆಲಸಗಳಿದ್ದು, 133 ಅಡ್ಡಮೋರಿ ಕೆಲಸಗಳು ಪ್ರಗತಿಯಲ್ಲಿದ್ದು, ಈ ಎಲ್ಲಾ ಅಡ್ಡ ಮೋರಿಗಳಿಗೆ ಆಗುವ ಅಂದಾಜು ಮೊತ್ತ ರೂ. 5663.53 ಲಕ್ಷಗಳು (1-1-94)

ಈ) ಹೌದು. ಟಿಬಿಸಿ ನಾಲೆಯ 0 ಇಂದ 122 ಕಿ.ಮಿ. ವರೆಗೆ ವಿತರಣಾ ನಾಲಾ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಟಿ. ಮರಿಯಪ್ಪ ನಾಲೆಯ 48 ಕಿಮಿ ವರೆಗಿನ ವಿತರಣಾ ನಾಲಾ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ. ತುಮಕೂರು ಉಪನಾಲೆಯ ಎಲ್ಲಾ ವಿತರಣಾ ನಾಲೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಈ ಜಿಲ್ಲಾ ವಿತರಣಾ ನಾಲೆಗಳಿಗೆ ಬೇಕಾಗುವ ಅಂದಾಜು ಮೊತ್ತ ರೂ. 3033.65 ಲಕ್ಷಗಳು (1-4-94ರಲ್ಲಿ)